246 ಡಾ॥ ಮಹದೇವಪ್ಪ ಹೆಚ್.ಸಿ : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳೆಷ್ಟು?

ಆ) ನೋಂದಣಿಯಾದ ಸದಸ್ಯರ ಸಂಖ್ಯೆ ಎಷ್ಟು? ಆ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ಸಂಖ್ಯೆ ಎಷ್ಟು?

ಇ) ಈ ಸಹಕಾರ ಸಂಘಗಳಿಂದ ಎಷ್ಟು ಸದಸ್ಯರಿಗೆ ಯಾವ ಯಾವ ಉದ್ದೇಶಕ್ಕಾಗಿ ಸಾಲ ಸೌಲಭ್ಯವನ್ನು ನೀಡಲಾಗಿದೆ?

ಈ) ಅದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಷ್ಟು ಸದಸ್ಯರಿಗೆ ಎಷ್ಟು ಮೊತ್ತದ ಸಾಲ ಸೌಲಭ್ಯವನ್ನು ನೀಡಲಾಗಿದೆ? (ತಾಲ್ಲೂಕುವಾರು, ಜಿಲ್ಲಾವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು)

ಶ್ರೀ ಲಕ್ಷ್ಮಣ ಸ.ಸವದಿ (ಸಹಕಾರ ಸಚಿವರು) :

ಅ) ದಿನಾಂಕ: 31.03.2009ಕ್ಕೆ ಇದ್ದಂತೆ ಸಹಕಾರ ಸಂಘಗಳ ಸಂಖ್ಯೆ 34,025 (ಕಾರ್ಯನಿರತ ಸಂಘಗಳು–29,298 ಸ್ಥಗಿತಗೊಂಡ ಸಂಘಗಳು– 2,589 ಹಾಗೂ ಸಮಾಪನೆಗೊಂಡ ಸಂಘಗಳು–2,138).

ಆ) ನೋಂದಣಿಯಾದ ಒಟ್ಟು ಸದಸ್ಯರ ಸಂಖ್ಯೆ 1.88 ಕೋಟಿಗಳು. ಈ ಪೈಕಿ ಪರಿಶಿಷ್ಟ ಜಾತಿ ಸದಸ್ಯರ ಸಂಖ್ಯೆ 17,59,431 ಮತ್ತು ಪರಿಶಿಷ್ಟ ಪಂಗಡದ ಸದಸ್ಯರ ಸಂಖ್ಯೆ 7,41,935 ಗಳಾಗಿರುತ್ತದೆ.

ಇ) ಸಹಕಾರ ಸಂಘಗಳು ಈ ಕೆಳಗಿನ ಉದ್ದೇಶಗಳಿಗೆ ಸದಸ್ಯರಿಗೆ ಸಾಲ ನೀಡುತ್ತವೆ.

ಉದ್ದೇಶಗಳು:–

1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳು ರೈತರಿಗೆ ಕೃಷಿಗಾಗಿ ಬೆಳೆ ಸಾಲದ ರೂಪದಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ನೀಡುತ್ತಿವೆ.

2) ಪಿಕಾರ್ಡ್ ಬ್ಯಾಂಕುಗಳು ಕೃಷಿಕರಿಗೆ ಕೃಷಿ ಹಾಗೂ ಕೃಷಿ ಪೂರಕ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ದೀರ್ಘಾವಧಿ ಸಾಲಗಳನ್ನು ನೀಡುತ್ತಿವೆ.

3) ಪಟ್ಟಣ ಸಹಕಾರ ಬ್ಯಾಂಕುಗಳು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ವ್ಯಾಪಾರ ಸಾಲ, ಜಾಮೀನು ಸಾಲ, ಗೃಹೋಪಯೋಗಿ ಸಾಲ, ಚಿನ್ನಾಭರಣ ಸಾಲ, ವೇತನಾಧರಿತ ಸಾಲ, ವೈಯಕ್ತಿಕ ಸಾಲ, ಯಂತ್ರೋಪಕರಣಗಳ ಖರೀದಿ ಸಾಲ, ನೇಕಾರರಿಗೆ ಮತ್ತು ಮೀನುಗಾರಿಕೆಗೆ ಸಾಲ ಹಾಗೂ ಇನ್ನು ಹಲವು ವಿವಿಧ ಉದ್ದೇಶಗಳಿಗಾಗಿ ಸಾಲ ಸೌಲಭ್ಯವನ್ನು ನೀಡುತ್ತಿವೆ.

ಈ) 2008–09ನೇ ಸಾಲಿನಲ್ಲಿ 3,40,343 ಪರಿಶಿಷ್ಟ ಜಾತಿ ಸದಸ್ಯರಿಗೆ ರೂ.52,381.21 ಲಕ್ಷ ಹಾಗೂ 1,56,709 ಪರಿಶಿಷ್ಟ ಪಂಗಡದ ಸದಸ್ಯರಿಗೆ ರೂ. 28,760.30 ಲಕ್ಷಗಳ ಸಾಲ ಸೌಲಭ್ಯ ನೀಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಡಾ॥ ಮಹದೇವಪ್ಪ ಹೆಚ್.ಸಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 246 ರ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಸದಸ್ಯರ ಸಂಖ್ಯೆ	ಈ ಪೈಕಿ ಸಾಲ ಪಡೆದ ಸದಸ್ಯರು		ಈ ಪೈಕಿ ಪರಿಶಿಷ್ಟ ಜಾತಿ ಸದಸ್ಯರ		ಈ ಪೈಕಿ ಪರಿಶಿಷ್ಟ ಪಂಗಡ ಸದಸ್ಯರ	
			ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	3	4	5	6
1	ಬೆಂಗಳೂರು ನಗರ-1	1265699	442735	39367.46	24714	423.00	6924	154.07
2	ಬೆಂಗಳೂರು ನಗರ-2	1669966	289188	65827.63	29816	1298.25	5281	526.75
3	ಬೆಂಗಳೂರು ಗ್ರಾಮಾಂತರ	276240	28690	9636.80	1886	548.33	554	149.12
4	ರಾಮನಗರ	266870	48261	6605.02	1949	571.74	485	142.44
5	ತುಮಕೂರು	937237	146232	62521.13	7059	2198.90	6095	1016.15
6	ಕೋಲಾರ	359640	33227	8979.86	5037	1357.52	1860	495.15
7	ಚಿಕ್ಕಬಳ್ಳಾಪುರ	336957	29381	5698.00	4327	607.15	1609	302.10
8	ಚಿತ್ರದುರ್ಗ	519773	25060	4033.13	4831	202.10	4406	228.95
9	ದಾವಣಗೆರೆ	456065	137929	40603.91	11839	3926.40	7310	1821.49
10	ಶಿವಮೊಗ್ಗ	372002	193949	32449.13	9806	1351.22	3359	649.12
11	ಮೈಸೂರು	700607	87175	54995.90	11563	4093.47	4510	1779.21
12	ಚಾಮರಾಜನಗರ	228249	13810	2738.44	3216	238.63	1965	114.49
13	ಮಂಡ್ಯ	506027	71895	15968.73	5651	1207.22	1587	270.21
14	ಹಾಸನ	469725	80925	33447.31	4991	764.22	1887	283.88

15	ಚಿಕ್ಕಮಗಳೂರು	307490	25148	9625.21	2295	280.26	657	152.75
16	ಮಡಿಕೇರಿ	230329	39637	18336.22	2195	256.30	1052	796.04
17	ದಕ್ಷಿಣ ಕನ್ನಡ	752576	333931	264147.10	16772	1517.63	26693	1887.61
18	ಉಡುಪಿ	615272	334487	31108.35	3105	3269.00	4128	6128.63
19	ಬೆಳಗಾವಿ	1296575	586711	1118415.98	42148	7542.87	19010	2034.57
20	ಬಿಜಾಪುರ	915248	460793	83527.17	45162	3346.42	5667	494.73
21	ಬಾಗಲಕೋಟೆ	764156	301841	92770.98	19369	4914.80	6736	1948.72
22	ಧಾರವಾಡ	640985	408556	5769.27	6104	1500.23	1479	562.68
23	ಗದಗ	263970	101341	10889.65	9296	561.93	4313	330.46
24	ಹಾವೇರಿ	352668	58094	13250.84	3400	422.72	2235	366.80
25	ಉತ್ತರ ಕನ್ನಡ	593543	229862	50691.77	17055	2853.96	5641	1015.72
26	ಬಳ್ಳಾರಿ	450541	48744	21835.78	3899	1230.91	10028	2310.47
27	ಬೀದರ್	340722	123672	32854.89	11791	1509.59	4373	295.21
28	ಗುಲ್ಬರ್ಗಾ	543202	164391	14992.55	13036	1129.87	3289	262.65
29	ಕೊಪ್ಪಳ	252086	53798	9859.44	8069	1478.92	2690	492.97
30	ರಾಯಚೂರು	243898	66051	14413.46	9962	1777.65	10886	1747.16
	ಒಟ್ಟು:-	**16928318**	**4965514**	**2175361.11**	**340343**	**52381.21**	**156709**	**28760.30**